**Akashvani : Bangalore**
**National Bulletin In Kannada**
**27.01.2025 / 1.10 pm**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**27.01.2025 / 1.10 pm**

**<><*<><>*><>**

<u>ಮುಖ್ಯಾಂಶಗಳು</u>

೧. ಗಣರಾಜ್ಯೋತ್ಸವ ಶುಭಾಶಯ ಕೋರಿದ ಜಾಗತಿಕ ನಾಯಕರಿಗೆ ಧನ್ಯವಾದ ಅರ್ಪಿಸಿದ ಪ್ರಧಾನಿ ನರೇಂದ್ರ ಮೋದಿ

೨. ಎಲ್ಲ ವಿದೇಶಿ ನೆರವನ್ನು ಸ್ಥಗಿತಗೊಳಿಸಿದ ಅಮೆರಿಕ ; ವಿವಿಧ ರಾಷ್ಟ್ರಗಳಿಗೆ ನೀಡಿರುವ ನೆರವು ಪರಿಶೀಲಿಸುವಂತೆ ಆದೇಶ

೩. ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಮೂರು ದಿನಗಳ ಯುಎಇ ಭೇಟಿ ; ದ್ವಿಪಕ್ಷೀಯ ಸಂಬಂಧ ಬಲವರ್ಧನೆಗೆ ಒತ್ತು

೪. ಪುರುಷರ ಹಾಕಿ ಇಂಡಿಯಾ ಲೀಗ್ ಪಂದ್ಯದಲ್ಲಿಂದು ಶ್ರಾಚಿರಾರ್ ಬೆಂಗಾಲ್ ಟೈಗರ್ಸ್-ದೆಹಲಿ ಎಸ್.ಜಿ. ಪೈಪರ್ಸ್ ಮುಖಾಮುಖಿ

**<><*<><>*><>**

ಭಾರತದ ೭೬ನೇ ಗಣರಾಜ್ಯೋತ್ಸವದ ಶುಭಾಶಯ ಕೋರಿದ ಜಾಗತಿಕ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ, ಧನ್ಯವಾದ ತಿಳಿಸಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರಾನ್ ಅವರ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಅವರು, ಕಳೆದ ವರ್ಷದ ಗಣರಾಜ್ಯೋತ್ಸವದಲ್ಲಿ ಅಧ್ಯಕ್ಷ ಮ್ಯಾಕ್ರಾನ್ ಅವರ ಉಪಸ್ಥಿತಿ ಉಭಯ ರಾಷ್ಟ್ರಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆ ಮತ್ತು ಸ್ನೇಹ ಸಂಬಂಧವನ್ನು ಪ್ರತಿನಿಧಿಸಿತ್ತು ಎಂದರು. ಇದೇ ವೇಳೆ ಅವರು, ಫ್ರಾನ್ಸ್ ನಾಯಕರನ್ನು ಪ್ಯಾರಿಸ್‌ನಲ್ಲಿ ನಡೆಯಲಿರುವ ಕೃತಕ ಬುದ್ದಿಮತ್ತೆ, ಕುರಿತ ಶೃಂಗಸಭೆಯಲ್ಲಿ ಭೇಟಿಯಾಗಲು ಎದುರು ನೀಡುತ್ತಿರುವುದಾಗಿ ತಿಳಿಸಿದರು. ಐರ್ಲೆಂಡ್ ಪ್ರಧಾನಿ ಮೈಕಲ್ ಮಾರ್ಟಿನ್ ಅವರ ಸಾಮಾಜಿಕ ಮಾಧ್ಯಮ ಸಂದೇಶಕ್ಕೆ ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ, ಪ್ರಜಾಪ್ರಭುತ್ವದಲ್ಲಿ ನಂಬಿಕೆ

ಹೊಂದಿರುವ ಆಧಾರದ ಮೇಲೆ ಭಾರತ ಹಾಗೂ ಐರ್ಲೆಂಡ್ ನಡುವಿನ ಸಂಬಂಧ ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಕಾರ್ಯಪ್ಪ ಪರೇಡ್ ಮೈದಾನದಲ್ಲಿ ನಡೆಯುವ ವಾರ್ಷಿಕ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್-ಎನ್‌ಸಿಸಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ. 'ಯುವ ಶಕ್ತಿ, ವಿಕಸಿತ ಭಾರತ' ಎಂಬುದು ಈ ವರ್ಷದ ಎನ್‌ಸಿಸಿ ಪಿಎಂ ರ್‍ಯಾಲಿಯ ಧ್ಯೇಯವಾಕ್ಯವಾಗಿದೆ. ಈ ಸಂದರ್ಭದಲ್ಲಿ, ೮೦೦ ಕ್ಕೂ ಹೆಚ್ಚು ಕೆಡೆಟ್‌ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ರಾಷ್ಟ್ರ ನಿರ್ಮಾಣದ ಕಡೆಗೆ ಎನ್‌ಸಿಸಿಯ ಬದ್ಧತೆಯನ್ನು ಪ್ರದರ್ಶಿಸಲಾಗುವುದು. ಇದಲ್ಲದೆ, ರ್‍ಯಾಲಿಯಲ್ಲಿ ೧೮ ಮಿತ್ರ ರಾಷ್ಟ್ರಗಳಿಂದ ೧೪೪ ಯುವ ಕೆಡೆಟ್‌ಗಳು ಭಾಗವಹಿಸಲಿದ್ದಾರೆ. ಇದಲ್ಲದೆ, ದೇಶಾದ್ಯಂತದ ಮೇರಾ ಯುವ ಭಾರತ್, ಶಿಕ್ಷಣ ಸಚಿವಾಲಯ ಮತ್ತು ಬುಡಕಟ್ಟು ವ್ಯವಹಾರಗಳ ೬೫೦ ಕ್ಕೂ ಹೆಚ್ಚು ಸ್ವಯಂಸೇವಕರು ವಿಶೇಷ ಅತಿಥಿಗಳಾಗಿ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

<><*<><>*><>

ವಿವಿಧ ರಾಷ್ಟ್ರಗಳಿಗೆ ತಾನು ನೀಡುತ್ತಿದ್ದ ಎಲ್ಲಾ ರೀತಿ ವಿದೇಶಿ ನೆರವನ್ನು ಅಮೆರಿಕ ಸ್ಥಗಿತಗೊಳಿಸಿದೆ. ಇದರ ಜೊತೆಗೆ ತನ್ನ 'ಅಮೆರಿಕ ಮೊದಲು' ನೀತಿಗೆ ಅನುಗುಣವಾಗಿ ವಿವಿಧ ದೇಶಗಳಿಗೆ ನೀಡುತ್ತಿದ್ದ ಹಣಕಾಸು ನೆರವನ್ನು ಪರಿಶೀಲಿಸಲು ಆದೇಶಿಸಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಕುರಿತಂತೆ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ಮಾಹಿತಿ ನೀಡಿರುವ ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರ ಟ್ಯಾಮಿ ಬ್ರೂಸ್, ಇನ್ನು ಮುಂದೆ ಅಮೆರಿಕದ ಜನರಿಗೆ ಯಾವುದೇ ಲಾಭವಿಲ್ಲದೇ ಇತರ ದೇಶಗಳಿಗೆ ಅಮೆರಿಕ ಹಣ ನೀಡುವುದಿಲ್ಲವೆಂದು ಅಧ್ಯಕ್ಷ ಟ್ರಂಪ್ ಸ್ಪಷ್ಟವಾಗಿ ಸೂಚಿಸಿದ್ದು, ಶ್ರಮಪಟ್ಟು ತೆರಿಗೆ ಕಟ್ಟುವವರ ಪರವಾಗಿ ಇದು ಸರಿಯಾದ ಕ್ರಮ ಮಾತ್ರವಲ್ಲದೇ ನೈತಿಕ ಹೊಣೆಯೂ ಹೌದು ಎಂದು ಹೇಳಿದರು. ೨೦೨೩ರಲ್ಲಿ ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ - ಯುಎಸ್‌ಎಐಡಿ ೧೫೮ ದೇಶಗಳಿಗೆ ಸುಮಾರು ೪೫ ಶತಕೋಟಿ ಡಾಲರ್ ನೆರವು ಮೀಸಲಿಟ್ಟಿತ್ತು.

<><*<><>*><>

ಉತ್ತರಾಖಂಡದಲ್ಲಿ ಇಂದಿನಿಂದ ಏಕರೂಪ ನಾಗರಿಕ ಸಂಹಿತೆ -ಯುಸಿಸಿ ಜಾರಿಗೆ ಬಂದಿದೆ. ಆ ಮೂಲಕ ಉತ್ತರಾಖಂಡ್ ಈ ಕಾನೂನನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ. ಅಧಿಕೃತ ತರಬೇತಿ

ಸೇರಿದಂತೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು, ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಮೂಲಕ ವೈಯಕ್ತಿಕ ನಾಗರಿಕ ಕಾನೂನುಗಳನ್ನು ಪ್ರಮಾಣೀಕರಿಸುವುದು ಏಕರೂಪ ನಾಗರಿಕ ಸಂಹಿತೆ - ಯುಸಿಸಿಯ ಗುರಿಯಾಗಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ.

ಧ್ವನಿ : ಪುಷ್ಕರ್ ಸಿಂಗ್ ಧಾಮಿ (೧೯ ಸೆಕೆಂಡ್ಸ್)

ಜಾತಿ, ಧರ್ಮ ಮತ್ತು ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವ ವೈಯಕ್ತಿಕ ನಾಗರಿಕ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನುಗಳಲ್ಲಿ ಏಕರೂಪತೆಯನ್ನು ತರಲು ಯುಸಿಸಿ ಅಡಿಯಲ್ಲಿ ಪ್ರಯತ್ನಿಸಲಾಗಿದೆ. ಧರ್ಮವನ್ನು ಲೆಕ್ಕಿಸದೆ, ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ನಾಗರಿಕರಿಗೆ ಮದುವೆ, ವಿಚ್ಛೇದನ, ಮತ್ತು ಉತ್ತರಾಧಿಕಾರದ ಕುರಿತು ಏಕರೂಪ ಮತ್ತು ಸಮಾನ ನಿಯಮಗಳನ್ನು ಸ್ಥಾಪಿಸಲು ಯುಸಿಸಿ ಪ್ರಯತ್ನಿಸುತ್ತದೆ. ಇದು ಎಲ್ಲಾ ವಿವಾಹಗಳು ಮತ್ತು ಲಿವ್-ಇನ್ ಸಂಬಂಧಗಳ ನೋಂದಣಿಯನ್ನು ಕಡ್ಡಾಯಗೊಳಿಸುತ್ತದೆ.

<><*<><>*><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಮೂರು ದಿನಗಳಿಗಾಗಿ ಯುಎಇ ಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಪಾಲುದಾರಿಕೆಯನ್ನು ಪರಿಶೀಲಿಸಲು ಮತ್ತು ಸಂಬಂಧವನ್ನು ಬಲಪಡಿಸುವ ಮಾರ್ಗಗಳನ್ನು ಅನ್ವೇಶಿಸಲು ಅಲ್ಲಿನ ನಾಯಕರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆಗೊಳಿಸಿರುವ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಯುಎಇ-ಭಾರತ ನಡುವಿನ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುಂದುವರಿಸಲು ಮತ್ತು ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಶಕ್ತಿ ನೀಡಲು ವಿದೇಶಾಂಗ ಸಚಿವರ ಈ ಭೇಟಿ ಅವಕಾಶ ಕಲ್ಪಿಸುತ್ತಿದೆ ಎಂದು ತಿಳಿಸಿದೆ.

<><*<><>*><>

ಇಂದಿನಿಂದ ಜಾರಿಗೆ ಬರುವಂತೆ ಪ್ರಯಾಗ್‌ರಾಜ್‌ನಲ್ಲಿರುವ ಮಹಾ ಕುಂಭಮೇಳ ಪ್ರದೇಶವನ್ನು ವಾಹನ ರಹಿತ ವಲಯವೆಂದು ಉತ್ತರ ಪ್ರದೇಶ ಸರ್ಕಾರ ಘೋಷಿಸಿದೆ. ಇದೇ ೨೯ ರಂದು ಮೌನಿ ಅಮವಾಸ್ಯೆಯಂದು ನಿರೀಕ್ಷಿಸಲಾದ ಬೃಹತ್ ಜನಸಂದಣಿಯನ್ನು ಸುಗಮವಾಗಿ ನಿರ್ವಹಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜನದಟ್ಟಣೆಯ ಮೇಲ್ವಿಚಾರಣೆ ಮಾಡಲು ಸಂಯೋಜಿತ ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಲಾಗಿದೆ. ತುರ್ತು ಪರಿಸ್ಥಿತಿಗಳನ್ನು ನಿರ್ವಹಿಸಲು ಹೆಚ್ಚಿನ ಜನಸಂದಣಿ

ಪ್ರದೇಶಗಳಲ್ಲಿ ತ್ವರಿತ ಪ್ರತಿಕ್ರಿಯಾ ತಂಡಗಳನ್ನು ನಿಯೋಜಿಸಲಾಗಿದೆ. ಮೊದಲನೇ ಬಾರಿಗೆ ಮಹಾಕುಂಭ ಮೇಳದಲ್ಲಿ ಪಾಲ್ಗೊಂಡಿರುವ ಕುರಿತು ಹರ್ಷ ವ್ಯಕ್ತಪಡಿಸಿರುವ ಮಾಜಿ ರಾಜ್ಯಸಭಾ ಸದಸ್ಯೆ ಹಾಗೂ ಭಾರತದ ಖ್ಯಾತ ಬಾಕ್ಸರ್ ಎಂ.ಸಿ. ಮೆರಿಕಾಮ್, ಹಿಂದೂ ಸಂಪ್ರದಾಯದ ಇಂತಹ ಬೃಹತ್ ಉತ್ಸವದಲ್ಲಿ ಮೊದಲ ಬಾರಿಗೆ ಪಾಲ್ಗೊಂಡು ಸಂತಸವಾಗಿದೆ ಎಂದು ಹೇಳಿದ್ದಾರೆ.

ಧ್ವನಿ : ಎಂ.ಸಿ. ಮೆರಿಕಾಮ್ (೧೩ ಸೆಕೆಂಡ್ಸ್)

<><*<><>*><>

ಮಹಾಕುಂಭಮೇಳ ಸನಾತನ ಸಂಸ್ಕೃತಿಯ ವಿಶಿಷ್ಟ ಸಂಕೇತ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಉತ್ತರಪ್ರದೇಶದ ಪ್ರಯಾಗ್ ರಾಜ್‌ಗೆ ಭೇಟಿ ನೀಡುವುದಕ್ಕೂ ಮುನ್ನ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಕುಂಬಮೇಳ ನಮ್ಮ ಸಾಮರಸ್ಯ ಆಧಾರಿತ ಜೀವನ ಸಿದ್ಧಾಂತದ ಪ್ರತಿಬಿಂಬವಾಗಿದೆ. ಐಕ್ಯತೆ ಮತ್ತು ಸಮಗ್ರತೆಯ ಉತ್ಸವವಾದ ಮಹಾಕುಂಬಮೇಳದಲ್ಲಿ ಪಾಲ್ಗೊಂಡು ಪವಿತ್ರ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಲು ಹಾಗೂ ಸಂತರಿಂದ ಆರ್ಶೀವಾದ ಪಡೆಯಲು ಎದುರು ನೋಡುತ್ತಿರುವುದಾಗಿ ತಿಳಿಸಿದರು. ಕೇಂದ್ರ ಸಚಿವರೊಂದಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಅಧಿತ್ಯನಾಥ್ ಉಪಸ್ಥಿತರಿರಲಿದ್ದಾರೆ.

<><*<><>*><>

ಗಣರಾಜ್ಯೋತ್ಸವ ದಿನವಾದ ನಿನ್ನೆ ಮಹಾಕುಂಭಮೇಳ ಪ್ರದೇಶದಲ್ಲಿ ಮಾಹಿತಿ ಮತ್ತು ಪ್ರಚಾರ ಸಚಿವಾಲಯ ಆಯೋಜಿಸಿರುವ ಡಿಜಿಟಲ್ ಪ್ರದರ್ಶನ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡಿದ್ದಾರೆ. ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕರು ಪ್ರದರ್ಶನದಿಂದ ಪಡೆದ ಮಾಹಿತಿಯ ಕುರಿತು ಮೆಚ್ಚಿಗೆ ವ್ಯಕ್ತಪಡಿಸಿದರು. ಸಚಿವಾಲಯ ಜನವರಿ ೧೩ ರಿಂದ ಫೆಬ್ರವರಿ ೨೬ರವರೆಗೆ ಆಯೋಜಿಸಿರುವ ಡಿಜಿಟಲ್ ಪ್ರದರ್ಶನದಲ್ಲಿ ಸಾರ್ವಜನಿಕರಿಗೆ ಕೇಂದ್ರ ಸರ್ಕಾರದ ವಿವಿಧ ಸಾರ್ವಜನಿಕ ಕಲ್ಯಾಣ ಯೋಜನೆಗಳು ಮತ್ತು ಜಾರಿಗೆ ತಂದಿರುವ ಪ್ರಮುಖ ನೀತಿಗಳ ಕುರಿತು ಮಾಹಿತಿ ನೀಡಲಾಗಿದೆ. ಪ್ರದರ್ಶನದಲ್ಲಿ ಭಾಗವಹಿಸಿದ ಹೆಚ್ಚಿನ ವೀಕ್ಷಕರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಡಿಜಿಟಲ್ ಪ್ರದರ್ಶನ, ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆ ಜೊತೆಗೆ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯದ ಪ್ರದರ್ಶನದ ಮೂಲಕ ಉಪಯುಕ್ತ ಮಾಹಿತಿ ಪಡೆದರು.

<><*<><>*><>

ರೈತರು, ಕೃಷಿ ಕಾರ್ಮಿಕರು ಮತ್ತು ಬಡತನ ರೇಖೆಗಿಂತ ಕುಟುಂಬಗಳಿಗಾಗಿ ತೆಲಂಗಾಣ ರಾಜ್ಯ ಸರ್ಕಾರ ಳ ಕಲ್ಯಾಣ ಯೋಜನೆಗಳನ್ನು ಆರಂಭಿಸಿದೆ. ರಾಜ್ಯದ ಸಚಿವರು ಹಾಗೂ ಸಾರ್ವಜನಿಕ ಪ್ರತಿನಿಧಿಗಳು ರಾಜ್ಯಾದ್ಯಂತ ನಿನ್ನೆ ಈ ಯೋಜನೆಗಳಿಗೆ ಔಪಚಾರಿಕ ಚಾಲನೆ ನೀಡಿದ್ದಾರೆ.

<><*<><>*><>

ಆಸ್ತಿ ಖರೀದಿಗೆ ಸಂಬಂಧಿಸಿದ ಭ್ರಷ್ಟಾಚಾರ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ಶ್ರೀಲಂಕಾ ಮಾಜಿ ಅಧ್ಯಕ್ಷ ಮಹಿಂದ್ ರಾಜಪಕ್ಸೆ ಅವರ ಪುತ್ರ ಯೋಶಿತ ರಾಜಪಕ್ಸೆ ಅವರಿಗೆ ಕೊಲೊಂಬೊ ನ್ಯಾಯಾಲಯ ಇಂದು ಜಾಮೀನು ನೀಡಿದೆ.

<><*<><>*><>

ಒಡಿಶಾದ ರೂರ್ಕೆಲಾದಲ್ಲಿ ನಡೆಯಲಿರುವ ಪುರುಷರ ಹಾಕಿ ಇಂಡಿಯಾ ಲೀಗ್ ಪಂದ್ಯದಲ್ಲಿಂದು ಶ್ರಾಚಿರಾರ್ ಬೆಂಗಾಲ್ ಟೈಗರ್ಸ್ ಮತ್ತು ದೆಹಲಿ ಎಸ್.ಜಿ. ಪೈಪರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೬ ಗಂಟೆಗೆ ಆರಂಭವಾಗಲಿದೆ. ದಿನದ ಮತ್ತೊಂದು ಪಂದ್ಯದಲ್ಲಿ ಜೆಎಸ್‌ಡಬ್ಲ್ಯೂ ಸುರ್ಮಾ ಹಾಕಿ ಕ್ಲಬ್, ವೇದಾಂತ ಕಾಳಿಂಗ ಲ್ಯಾನ್ಸ್‌ರ್ಸ್ ತಂಡವನ್ನು ಎದುರಿಸಲಿದೆ. ಈ ಪಂದ್ಯ ರಾತ್ರಿ ೮.೧೫ಕ್ಕೆ ನಡೆಯಲಿದೆ.

<><*<><>*><>

ಫ್ರಾನ್ಸ್ ನಲ್ಲಿ  ನಡೆಯಲಿರುವ ಮುಕ್ತ  ಆಸಿಟ್ಯಾನಿ ಟೆನಿಸ್  ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು, ಭಾರತದ ಯು.ಕಿ ಬಾಂಬ್ರಿ ಮತ್ತು ಕ್ರೋಯೇಶಿಯಾದ ಇವಾನ್ ಡೊಡಿಗ್ ಜೋಡಿ, ಜರ್ಮನಿಯ ಮಾರ್ಕ್ ವಾಲ್ನರ್ ಮತ್ತು ಜಾಕೊಬ್ ಶ್ನೈಟರ್ ಜೋಡಿಯ ವಿರುದ್ಧ ಸೆಣಸಾಟ ನಡೆಸಲಿದೆ.  ಪಂದ್ಯ ಭಾರತೀಯ ಕಾಲಮಾನ ೮.೪೦ಕ್ಕೆ ಆರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>